## ಅಂಗಾಂಗ ದಾನದ ಮಹತ್ವ

'ನಮ್ಮ ರಾಜ್ಯದಲ್ಲಿ ಅಂಗಾಂಗ ದಾನದ ಬಗ್ಗೆ ಜನರಲ್ಲಿ ಈಗ ಸಾಕಷ್ಟು ಅರಿವು ಮೂಡಿದೆ. ಅಂಗಾಂಗ ದಾನ ಮಾಡುವವರ ಸಂಖ್ಯೆ ಏರುತ್ತಿದ್ದರೂ ಅಪೇಕ್ಷಿತರ ಸಂಖ್ಯೆ ಇದಕ್ಕಿಂತ ಎರಡರಷ್ಟು ಹೆಚ್ಚಾಗಿದೆ. ಹೀಗಾಗಿ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುವ ಕೆಲಸ ಇನ್ನೂ ತ್ವರಿತವಾಗಿ ಮಾಡಬೇಕಾಗಿದೆ' ಎಂದು ಹೇಳುತ್ತಾರೆ ರಾಜ್ಯ ಅಂಗಾಂಗ ದಾನಕ್ಕೆ ನೋಡಲ್ ಸಂಸ್ಥೆಯಾಗಿರುವ 'ಜೀವ ಸಾರ್ಥಕತೆ' ಸಂಚಾಲಕ ಡಾ. ಕಿಶೋರ್ ಫಡ್ಕೆ.


'ಜೀವ ಸಾರ್ಥಕತೆ' ಯೋಜನೆಯಡಿ ನೋಂದಣಿ ಮಾಡಿದ ರೋಗಿಗೆ ಸಂಸ್ಥೆಯೇ ಅಂಗಾಂಗ ಸರದಿಯಂತೆ ನೀಡುತ್ತಿದೆ. ಅಪಘಾತ ಮತ್ತಿತರ ಕಾರಣಗಳಿಂದ ಮೆದುಳು ನಿಷ್ಕ್ರಿಯಗೊಂಡಿದ್ದ ವ್ಯಕ್ತಿ ದಾನ ಮಾಡಲು ಸಾಧ್ಯವಿರುವ ಎಲ್ಲ ಅಂಗಾಂಗ ದಾನ ಮಾಡಿದರೆ ಎಂಟರಿಂದ ಹತ್ತು ರೋಗಿಗಳ ಜೀವ ಉಳಿಸಬಹುದು. ಹೃದಯ, ಕಿಡ್ನಿ, ಕಣ್ಣು, ಪಿತ್ತಜನಕಾಂಗ, ಶ್ವಾಸಕೋಶ ಮುಂತಾದ ಅಂಗಗಳನ್ನು ದಾನ ಮಾಡಬಹುದು.

ಉಪಾಯ. ವಂಶವಾಹಿ ತೊಂದರೆಯಿಂದಲೂ ಮಕ್ಕಳಲ್ಲಿ ಹೃದ್ರೋಗ ಸಮಸ್ಯೆ ಬರುತ್ತದೆ. ಕಾರ್ಡಿಯೊ ಮಯೋಪತಿ ಒಂದೂವರೆ ಲಕ್ಷ ಮಕ್ಕಳಲ್ಲಿ ಒಬ್ಬರಿಗೆ ಬರುವುದಾದರೆ ದೊಡ್ಡವರಲ್ಲಿ 25 ಸಾವಿರ ಜನರಲ್ಲಿ ಒಬ್ಬರಿಗೆ ಬರುತ್ತದೆ, ಆದರೆ ಈ ಸಮಸ್ಯೆ ಗೊತ್ತಾಗುವುದು ಸಮಸ್ಯೆ ಅಂತಿಮ ಹಂತಕ್ಕೆ ಬಂದಾಗಲೇ' ಎಂದು ಹೇಳುತ್ತಾರೆ ನಾರಾಯಣ ಹೆಲ್ತ್‌ಸಿಟಿಯಲ್ಲಿ ಮಕ್ಕಳ ಹೃದ್ರೋಗ ತಜ್ಞರಾಗಿರುವ ಡಾ. ಶಶಿರಾಜ್.

'ಮಕ್ಕಳಲ್ಲಿ ಸಾಮಾನ್ಯವಾಗಿ ಹೃದ್ರೋಗ ಸಮಸ್ಯೆ ಆನುವಂಶಿಕವಾಗಿಯೇ ಬರುವುದಾದರೂ ಭಾರತದಲ್ಲಿ ಕಲುಷಿತ ವಾತಾವರಣ, ಮಧುಮೇಹದಂತಹ ಸಮಸ್ಯೆಯಿಂದಲೂ ಬರುವ ಸಾಧ್ಯತೆ ಇದೆ. ಸೋದರ ಸಂಬಂಧಿಗಳಲ್ಲಿ ಮದುವೆಯಾದರೂ ಹೃದಯದ ತೊಂದರೆ ಬರುವ ಅಪಾಯವಿದೆ' ಎಂದು ವಿವರ ನೀಡುತ್ತಾರೆ ಈ ವೈದ್ಯರು.

'ಹೃದಯ ಕಸಿ ಶಸ್ತ್ರಚಿಕಿತ್ಸೆ ಯಶಸ್ವಿಯಾಗಬೇಕಾದರೆ ಹೃದಯ ಸ್ವೀಕರಿಸುವ ವ್ಯಕ್ತಿಯ ಆರೋಗ್ಯ ಚೆನ್ನಾಗಿರಬೇಕು. ನಾಲ್ಕು ವರ್ಷದ ಬಾಲಕ ಚಹಲ್ ಪಟ್ವಾರಿ ಪ್ರಕರಣದಲ್ಲಿ ಮಗು ನಾಲ್ಕನೇ ಹಂತದ ಹೃದಯ ವೈಫಲ್ಯದಿಂದ ಬಳಲುತ್ತಿದ್ದ. ಆರೋಗ್ಯ ತುಂಬ ಕ್ಷೀಣಿಸಿದ ಕಾರಣ ಬಹಳ ಕೃಶನಾಗಿದ್ದ. ಅವನ ಆರೋಗ್ಯವನ್ನು ಸುಸ್ಥಿತಿಗೆ ತರುವುದು ನಮಗೆ ದೊಡ್ಡ ಸವಾಲಾಗಿತ್ತು. ಜೊತೆಗೆ ಆತನಿಗೆ ಹೃದಯ ಕಸಿ ಮಾಡಲು ದಾನಿಯಿಂದ ಹೃದಯ ಸಿಗುವವರಿಗೆ ಕಾಯುವುದು, ಆರೋಗ್ಯ ಕಾಪಾಡುವುದು ಕೂಡ ಕಷ್ಟವಾಗಿತ್ತು. ಸುಮಾರು ಹನ್ನೊಂದು ತಿಂಗಳ ಕಾಲ ಮಗುವನ್ನು ಜೀವರಕ್ಷಕ ಔಷಧಿಯಲ್ಲಿ ಇಡಬೇಕಾಯಿತು. ನಮ್ಮ ಸಮಗ್ರ ವೈದ್ಯಕೀಯ ತಂಡದ ನೆರವಿನಿಂದ ಆತನಿಗೆ ಸೂಕ್ತ ಚಿಕಿತ್ಸೆ ನೀಡಿದ್ದರಿಂದ ಇಷ್ಟೂ ಸುದೀರ್ಘ ಅವಧಿಯಲ್ಲಿ ಮಗುವಿಗೆ ಒಂದು ಬಾರಿಯೂ ಸೋಂಕು ತಗುಲಲಿಲ್ಲ. ಅಲ್ಲದೆ ಪೌಷ್ಟಿಕ ಆಹಾರವನ್ನೂ ನೀಡಿ ಮಗುವನ್ನು ಆರೋಗ್ಯಪೂರ್ಣವಾಗಿಸಿದ ಕಾರಣ ಹೃದಯಕಸಿಗೆ ಬಾಲಕ ಚೆನ್ನಾಗಿ ಸ್ಪಂದಿಸಲು ಕಾರಣವಾಯಿತು' ಎಂದು ತಾವು ಯಶಸ್ವಿಯಾಗಿ ನಿರ್ವಹಿಸಿದ ಹೃದಯ ಕಸಿ ಬಗ್ಗೆ ಹೆಮ್ಮೆಯ



ಮಾತುಗಳನ್ನಾಡುತ್ತಾರೆ ಡಾ. ಶಶಿರಾಜ್.

## ರಕ್ತದ ಗುಂಪು ಹೊಂದಾಣಿಕೆ

'ಸಾಮಾನ್ಯವಾಗಿ ಮಕ್ಕಳಿಗೆ ಆನುವಂಶಿಕವಾಗಿ ಹೃದ್ರೋಗ ಸಮಸ್ಯೆ ಬರುತ್ತದೆ. ದಾನಿಯಿಂದ ಪಡೆದ ಹೃದಯವನ್ನು ರೋಗಿಗೆ ಕಸಿ ಶಸ್ತ್ರಚಿಕಿತ್ಸೆ ಮಾಡಬೇಕಾದರೆ ರಕ್ತದ ಗುಂಪು ಹೊಂದಾಣಿಕೆಯಾಗಬೇಕು, ಅಲ್ಲದೆ ರೋಗಿ ಹೃದಯವನ್ನು ತನಗಿಂತ ಎರಡೂವರೆ ಪಟ್ಟು ಹೆಚ್ಚು ತೂಕದ ವ್ಯಕ್ತಿಯಿಂದ ಮಾತ್ರ ಸ್ವೀಕರಿಸಬಹುದು. ಹೃದಯ ಕಸಿ ಆಗಿ ಆಸ್ಪತ್ರೆಯಿಂದ ರೋಗಿ ಮನೆಗೆ ಮರಳಿದರೂ ಜೀವನಪೂರ್ತಿ ರೋಗನಿರೋಧಕ (immuno suppression) ಔಷಧಿಯನ್ನು ತೆಗೆದುಕೊಳ್ಳಬೇಕಾಗುತ್ತದೆ. ಸೋಂಕು, ಅಲರ್ಜಿ ಆಗದಂತೆ ಬಹಳ ಎಚ್ಚರಿಕೆ ವಹಿಸಬೇಕಾಗುತ್ತದೆ' ಎಂದು ವಿವರ ನೀಡುತ್ತಾರೆ ನಾರಾಯಣ ಹೆಲ್ತ್‌ಸಿಟಿಯಲ್ಲಿ ಹೃದ್ರೋಗ ಶಸ್ತ್ರಚಿಕಿತ್ಸಕರಾಗಿರುವ ಡಾ.ಜ್ಯೂಲಿಯಸ್ ಪುನ್ನೆನ್.

ಈ ಬಾಲಕನಿಗೆ ಹೃದಯ ದಾನ ನೀಡಿದವರು 45 ವರ್ಷದವರಾಗಿದ್ದು, ಮೆದುಳು ನಿಷ್ಕ್ರಿಯಗೊಂಡಿರುವ ಕಾರಣ ಅವರ ಮನೆಯವರು ಅಂಗಾಂಗ ದಾನ ಮಾಡಲು ಒಪ್ಪಿಕೊಂಡ ಹಿನ್ನೆಲೆಯಲ್ಲಿ ಮಗುವಿಗೆ ಈ ಹೃದಯ ಲಭಿಸಿತ್ತು.

ಹೃದಯ ಕಸಿ ಮಾಡಿಸಿಕೊಂಡವರು ತೀವ್ರ ಆರೋಗ್ಯ ಕಾಳಜಿ ವಹಿಸಿದರೆ ಸಹಜ ಜೀವನ ನಡೆಸಬಹುದು. ಹತ್ತು ವರ್ಷಗಳ ಹಿಂದೆ ಹೃದಯ ಕಸಿ ಮಾಡಿಸಿಕೊಂಡ ವಿದ್ಯಾರ್ಥಿ ಈಗ ಕಾಲೇಜು ಓದುತ್ತಿದ್ದು, ಓದಿನಲ್ಲೂ ಮುಂದಿದ್ದಾನೆ. ಮತ್ತೊಬ್ಬ ಹುಡುಗ ತನ್ನ ಶಾಲಾ ದಿನಗಳಲ್ಲಿ ಹೃದಯ ಕಸಿ ಮಾಡಿಸಿಕೊಂಡಿದ್ದು, ಈಗ ಓದು ಮುಗಿದು ಎಂಜಿನಿಯರ್ ಆಗಿ ಕೆಲಸ ಮಾಡುತ್ತಿದ್ದಾನೆ. ನಾರಾಯಣ ಹೃದಯಾಲಯ ಒಂದರಲ್ಲೇ ಇದುವರೆಗೆ ಸುಮಾರು 75 ಜನರಿಗೆ ಯಶಸ್ವಿಯಾಗಿ ಹೃದಯ ಕಸಿ ಶಸ್ತ್ರಚಿಕಿತ್ಸೆ ಮಾಡಲಾಗಿದೆ, ಇವರೆಲ್ಲರೂ ಆರೋಗ್ಯಕರ ಜೀವನವನ್ನು ನಡೆಸುತ್ತಿದ್ದು, ಪ್ರಾಣಾಪಾಯದಿಂದ ಪಾರಾಗಿದ್ದಾರೆ. ಈ ನಿದರ್ಶನಗಳು ಹೃದ್ರೋಗ ಸಮಸ್ಯೆ ಇರುವವರಿಗೆ ಬದುಕುವ ಆಶಾಕಿರಣವನ್ನು ಹೆಚ್ಚಿಸುವಲ್ಲಿ ಸಹಾಯಕವಾಗಿದೆ.